**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 946/2022**

**ಪ್ರಾಸಾಃ- 4 ಚಾಸಾಃ- 12**

| | | |
|---|---|---|
| ಸಾಕ್ಷಿಯ ಹೆಸರು | : | ಗೌಡರ ಹಂಪಮ್ಮ |
| ಗಂಡನ ಹೆಸರು | : | ಮೂರ್ತಿ |
| ವಯಸ್ಸು | : | 50 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ದೊಡ್ಡ ಅಂತಾಪುರ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 18.12.2024**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

1. ಮೂರು ವರ್ಷಗಳ ಹಿಂದೆ ಪೀರಲ ಹಬ್ಬ ಇರುವ ದಿನ ಗಂಗಪ್ಪನು ನಮ್ಮ ಮನೆಯ ಎದುರಿಗೆ ಬಿದ್ದಿರುತ್ತಾನೆ ಎಂದು ಹೇಳಿದ ಮೇರೆಗೆ ನಾನು ನೀರು ತೆಗೆದುಕೊಂಡು ಹೋಗಿ ಹಾಕಿರುತ್ತೇನೆ. ನಂತರ ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಆತನು ಮರಣ ಹೊಂದಿರುತ್ತಾನೆ ಎಂದು ಗೊತ್ತಾಯಿತು. ಆರೋಪಿತರು ನನಗೆ ಗೊತ್ತಿಲ್ಲ. ಚಾಸಾ 1 ನನಗೆ ಗೊತ್ತು. ನನ್ನ ಎದುರಿಗೆ ಯಾರು ಜಗಳ ಮಾಡಿರುವುದಿಲ್ಲ. ಗಂಗಪ್ಪನನ್ನು ಯಾರು ನೂಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಗಂಗಪ್ಪನು ಸಾಯಂಕಾಲ 6-00 ಗಂಟೆ ಸುಮಾರಿಗೆ ಬಿದ್ದಿರಬಹುದು. ನ್ಯಾಯಾಧೀಶರ ಮುಂದೆ ನಾನು ಹೇಳಿಕೆ ಕೊಟ್ಟಿರುತ್ತೇನೆ. ಸದರಿ ಹೇಳಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-14 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಆರ್ ಕೆ ವಕೀಲರು ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ .**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು**)

ಓ. ಹೇ. ಕೆ. ಸರಿ ಇದೆ.

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 946/2022**

**ಪ್ರಾಸಾಃ- 5 ಚಾಸಾಃ- 13**

| | | |
|---|---|---|
| ಸಾಕ್ಷಿಯ ಹೆಸರು | : | ಮಾರೆಪ್ಪ |
| ತಂದೆಯ ಹೆಸರು | : | ಸಿದ್ದಯ್ಯ |
| ವಯಸ್ಸು | : | 46 ವರ್ಷ |
| ವೃತ್ತಿ | : | ಕಿರಾಣಿ ಅಂಗಡಿ ಕೆಲಸ |
| ವಾಸಸ್ಥಳ | : | ದೊಡ್ಡ ಅಂತಾಪುರ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 18.12.2024**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

1. ಆರೋಪಿತರು ಗೊತ್ತು. ಚಾಸಾ 1 ಗೊತ್ತು. ಮೃತ ಗಂಗಪ್ಪ ಗೊತ್ತು. ಚಾಸಾ 1 ಮತ್ತು ಆರೋಪಿತರ ನಡುವೆ ಆದ ಜಗಳದ ನನಗೆ ಗೊತ್ತಿಲ್ಲ. ಗಂಗಪ್ಪನು ಹೇಗೆ ಬಿದ್ದನು ಮತ್ತು ಯಾರು ನೂಕಿದರು ಎಂದು ನನಗೆ ಗೊತ್ತಿಲ್ಲ. ಯಾವ ಕಾರಣಕ್ಕೆ ಮರಣ ಹೊಂದಿರುತ್ತಾನೆ ಎಂದು ನನಗೆ ಗೊತಿತಸಲ್ಲ. ಈ ಬಗ್ಗೆ ಪೋಲೀಸರ ಮುಂದೆ ನಾನು ಹೇಳಿಕೆ ಕೊಟ್ಟಿಲ್ಲ.

(**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ**).

**ಪಾಟೀ ಸವಾಲುಃ ಅಭಿಯೋಜಕರವರಿಂದಃ**

2. ದಿಃ 9-8-2022 ರಂದು ಪೀರಲಾ ಹಬ್ಬದ ಕೊನೆಯ ದಿನ ಇತ್ತು ಎಂದರೆ ಸರಿ. ಸಂಜೆ ದೇವರನ್ನು ನೋಡಲು ನಾನು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ಮತ್ತು ಆರೋಪಿತರ ನಡುವೆ ಜಗಳ ನಡೆದಿತ್ತು ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ಆರೋಪಿತರು ಚಾಸಾ 1 ರವರನ್ನು ನಾಯಕರ ಜಾತಿಯ ರಸನ ಹಡ ಎಂದು ಬೈಯುತ್ತಿದ್ದಾಗ ಚಾಸಾ 11 ರವರು ಜಗಳ ಬಿಡಿಸಿ ಕರೆದುಕೊಂಡು ಹೋದರು ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಆರ್ ಕೆ ವಕೀಲರಿಂದಃ</u>**

3. ಪೀರಲ ಹಬ್ಬದ ದಿನ ಯಾರು ಯಾರನ್ನು ಬೈದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಈ ಪ್ರಕರಣದ ಬಗ್ಗೆ ನನಗೇನು ಗೊತಿತಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು**)

ಓ. ಹೇ. ಕೆ. ಸರಿ ಇದೆ.

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 946/2022**

**ಪ್ರಾಸಾಃ- 6 ಚಾಸಾಃ- 14**

| | | |
|---|---|---|
| ಸಾಕ್ಷಿಯ ಹೆಸರು | : | ಜಗದೀಶ |
| ತಂದೆಯ ಹೆಸರು | : | ಎರ್ರಿಸ್ವಾಮಿ |
| ವಯಸ್ಸು | : | 35 ವರ್ಷ |
| ವೃತ್ತಿ | : | ಚಾಲಕ |
| ವಾಸಸ್ಥಳ | : | ದೊಡ್ಡ ಅಂತಾಪುರ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 18.12.2024**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

1. ಚಾಸಾ 1 ಗೊತ್ತು. ಮೃತ ಗಂಗಪ್ಪ ಗೊತ್ತು. ಆತನು ನನಗೆ ಅಣ್ಣನಾಗಬೇಕು. ನಾವು ವಾಲ್ಮೀಕಿ ಜನಾಂಗದವರು. ಆರೋಪಿತರು ಗೊತ್ತು, ಅವರು ಕುರುಬ ಜನಾಂಗದವರು. 3 ವರ್ಷಗಳ ಹಿಂದೆ ಮೊಹರಂ ಹಬ್ಬದಲ್ಲಿ ಮೃತನ ಜೊತೆ ಆರೋಪಿತರು ವಾದ ಮಾಡುತ್ತಿದ್ದು ಆಗ ನಾನು ಇರಲಿಲ್ಲ. ನಂತರ ಗಲಾಟೆಯಾದ ಕಾರಣ ಮೃತ ಗಂಗಪ್ಪ ಬಿದ್ದಿರುತ್ತಾನೆ ಎಂದು ನನಗೆ ಗೊತ್ತಾಯಿತು. ಆತನ ತಲೆಗೆ ಪೆಟ್ಟಾಗಿದ್ದರಿಂದ ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ವಿಮ್ಸ್ ಆಸ್ಪತ್ರೆಗೆಯಲ್ಲಿ ಗಂಗಪ್ಪನು ಮರಣ ಹೊಂದಿರುತ್ತಾನೆ ಎಂದು ಹೇಳಿರುತ್ತಾರೆ. ಯಾವ ಕಾರಣಕ್ಕೆ ಗಲಾಟೆಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಯಾರು ಯಾರಿಗೆ ಬೈದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

(**ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದು ಅದನ್ನು ಪುರಸ್ಕರಿಸಲಾಗಿದೆ**).

**<u>ಪಾಟೀ ಸವಾಲುಃ ಅಭಿಯೋಜಕರವರಿಂದಃ</u>**

2. ಬ್ಯಾನರ್ ಹರಿದಿರುತ್ತಾರೆ ಎಂದು ಆರೋಪಿತರು ಮೂರ್ತಿಯ ಜೊತೆ ಜಗಳ ಮಾಡಿದ್ದರು ಎಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಆರೋಪಿತರು ಮೂರ್ತಿಗೆ ನಾಯಕರ ಜಾತಿಯ ರಸನ ಹಡ ಎಂದು ಬೈದಿದ್ದರು ನಂತರ ಸದರಿ ಜಗಳವನ್ನು ಬಿಡಿಸಿ ಕಳುಹಿಸಿದ್ದರು ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-15 ಎಂದು ಗುರುತಿಸಲಾಯಿತು. ಆರೋಪಿತರು ಚಾಸಾ 1 ರವರನ್ನು ಬೈದ ವಿಷಯ ಗೊತ್ತಿದ್ದರೂ ಸಹ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಆರ್ ಕೆ ವಕೀಲರಿಂದಃ</u>**

3. ಪೀರಲ ಹಬ್ಬದ ದಿನ ಯಾರ ಯಾರ ಮಧ್ಯದಲ್ಲಿ ಏನು ಬೈದಾಟ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಗಂಗಪ್ಪನು ಲೋ ಬಿಪಿಯಾಗಿ ಸತ್ತಿರುತ್ತಾನೆ ಎಂದು ಆಸ್ಪತ್ರೆಯಲ್ಲಿ ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಮರು ವಿಚಾರಣೆ ಇಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು**)

ಓ. ಹೇ. ಕೆ. ಸರಿ ಇದೆ.

**ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**